ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 25-11-2000.

# *ತಂದೆಯ ಸಮಾನರಾಗಲು ಎರಡು ವಿಷಯಗಳ ದೃಢತೆಯನ್ನು ಇಟ್ಟುಕೊಳ್ಳಿರಿ- ಸ್ವಮಾನದಲ್ಲಿ ಇರಬೇಕು ಹಾಗೂ ಎಲ್ಲರಿಗೂ ಸನ್ಮಾನ(ಗೌರವ) ಕೊಡಬೇಕು*

(बाप समान बनने के लिए दो बातों की दृढ़ता रखो - स्वमान में रहना है और सबको सम्मान देना है)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ತಮ್ಮ ಅತೀ ಪ್ರಿಯ, ಮಧುರಾತಿ ಮಧುರ ಚಿಕ್ಕ ಬ್ರಾಹ್ಮಣ ಪರಿವಾರ ಎಂದಾದರೂ ಹೇಳಿ, ಬ್ರಾಹ್ಮಣ ಸಂಸಾರ ಎಂದಾದರೂ ಹೇಳಿ, ಅವರನ್ನೇ ನೋಡುತ್ತಿದ್ದರು. ಈ ಚಿಕ್ಕ ಸಂಸಾರ ಎಷ್ಟು ಭಿನ್ನವಾಗಿದೆ ಹಾಗೂ ಪ್ರಿಯವಾಗಿದೆ. ಏಕೆ ಪ್ರಿಯವಾಗಿದೆ? ಏಕೆಂದರೆ ಈ ಬ್ರಾಹ್ಮಣ ಸಂಸಾರದ ಪ್ರತಿಯೊಂದು ಆತ್ಮ ವಿಶೇಷ ಆತ್ಮವಾಗಿದೆ. ನೋಡುವುದರಲ್ಲಿ ಸಾಧಾರಣ ಆತ್ಮರಾಗಿದ್ದಾರೆ ಆದರೆ ಎಲ್ಲಕ್ಕಿಂತ ದೊಡ್ಡ ವಿಶೇಷತೆ ಪ್ರತಿಯೊಬ್ಬ ಬ್ರಾಹ್ಮಣ ಆತ್ಮರಲ್ಲಿದೆ- ಪರಮಾತ್ಮನನ್ನು ತಮ್ಮ ದಿವ್ಯ ಬುದ್ಧಿಯಿಂದ ಗುರುತಿಸಿದರು, 90 ವರ್ಷದ ಮುದುಕರಾಗಿರಲಿ, ಅನಾರೋಗ್ಯದಲ್ಲಿದ್ದಾರೆ ಆದರೂ ಪರಮಾತ್ಮನನ್ನು ಗುರುತಿಸುವ ದಿವ್ಯ ಬುದ್ಧಿ, ದಿವ್ಯ ನೇತ್ರ ಬ್ರಾಹ್ಮಣ ಆತ್ಮನ ಹೊರತು ಹೆಸರುವಾಸಿ ವಿ. ವಿ. ಐ. ಪಿ ಯಲ್ಲಿಯೂ ಸಹ ಇಲ್ಲ. ನೀವೆಲ್ಲಾ ಮಾತೆಯರು ಇಲ್ಲಿಗೆ ಏಕೆ ಬಂದಿರುವಿರಿ? ಕಾಲುಗಳಿಂದ

ನಡೆಯಲು ಸಾಧ್ಯವಾದರೂ, ಸಾಧ್ಯವಾಗದೇ ಇದ್ದರೂ ಸಹ ತಲುಪಿಬಿಟ್ಟಿದ್ದೀರಿ. ಗುರುತಿಸಿದ್ದೀರಿ ಆದ್ದರಿಂದಲೇ ತಲುಪಿದ್ದೀರಿ ಅಲ್ಲವೇ! ಈ ಗುರುತಿಸುವ ನೇತ್ರ, ಗುರುತಿಸುವ ಬುದ್ಧಿ ಇದು ನಿಮ್ಮ ಹೊರೆತು ಬೇರೆ ಯಾರಿಗೂ ಪ್ರಾಪ್ತಿಯಾಗಲು ಸಾಧ್ಯವಿಲ್ಲ. ಎಲ್ಲಾ ಮಾತೆಯರು ಈ ಗೀತೆಯನ್ನು ಹಾಡುತ್ತೀರಲ್ಲವೇ- ನಾವು ನೋಡಿದೆವು, ನಾವು ತಿಳಿದುಕೊಂಡೆವು... ಮಾತೆಯರಿಗೆ ಈ ನಶೆ ಇದೆಯೇ? ಕೈ ಅಲುಗಾಡಿಸುತ್ತಿದ್ದಾರೆ, ಬಹಳ ಒಳ್ಳೆಯದು. ಪಾಂಡವರಿಗೆ ನಶೆ ಇದೆಯೇ? ಒಬ್ಬರು ಇನ್ನೊಬ್ಬರಿಗಿಂತ ಮುಂದಿದ್ದಾರೆ ಶಕ್ತಿಯರಲ್ಲಿಯೂ ಕೊರತೆ ಇಲ್ಲ ಪಾಂಡವರಲ್ಲಿಯೂ ಕೊರತೆ ಇಲ್ಲ. ಬಾಪ್‌ದಾದಾರವರಿಗೆ ಖುಷಿ ಇದೆ- ಈ ಚಿಕ್ಕ ಸಂಸಾರ ಎಷ್ಟು ಪ್ರಿಯವಾಗಿದೆ. ಪರಸ್ಪರವಾಗಿ ಭೇಟಿಯಾದಾಗ ಎಷ್ಟು ಪ್ರಿಯ ಆತ್ಮರು ಎನಿಸುತ್ತೀರಿ!

ದೇಶ ವಿದೇಶದ ಸರ್ವ ಆತ್ಮರಿಂದ ಇಂದು ಇದೇ ಹೃದಯದ ಗೀತೆಯನ್ನು ಕೇಳುತ್ತಿದ್ದಾರೆ- ಬಾಬಾ, ಮಧುರ ಬಾಬಾ! ನಾವು ತಿಳಿದುಕೊಂಡೆವು, ನಾವು ನೋಡಿದೆವು. ಈ ಹಾಡನ್ನು ಹಾಡುತ್ತಾ ಹಾಡುತ್ತಾ ನಾಲ್ಕಾರು ಕಡೆಯ ಮಕ್ಕಳು, ಒಂದು ಕಡೆ ಖುಷಿಯಲ್ಲಿ ಇನ್ನೊಂದು ಕಡೆ ಸ್ನೇಹದ ಸಾಗರದಲ್ಲಿ ಸಮಾವೇಶವಾಗಿದ್ದರು. ಯಾರೆಲ್ಲಾ ನಾಲ್ಕಾರು ಕಡೆ ಇಲ್ಲಿ ಸಾಕಾರದಲ್ಲಿ ಇಲ್ಲದಿದ್ದರೂ ಹೃದಯದಿಂದ, ದೃಷ್ಟಿಯಿಂದ ಬಾಪ್‌ದಾದಾರವರ ಸಮ್ಮುಖದಲ್ಲಿದ್ದಾರೆ ಹಾಗೂ ಬಾಪ್‌ದಾದಾರವರು ಸಹ ಸಾಕರದಲ್ಲಿ ಮಕ್ಕಳನ್ನು ಸಮ್ಮುಖದಲ್ಲಿ ನೋಡುತ್ತಿದ್ದಾರೆ. ದೇಶದವರಾಗಿರಲಿ ಅಥವಾ ವಿದೇಶದವರಾಗಿರಲಿ, ಬಾಪ್‌ದಾದಾರವರು ಎಷ್ಟು ಸಮಯದಲ್ಲಿ ತಲುಪಬಹುದು? ಎಷ್ಟು ಸಮಯದಲ್ಲಿ ಚಕ್ರ ಸುತ್ತಬಹುದು? ನಾಲ್ಕಾರು ಕಡೆಯ ಮಕ್ಕಳಿಗೆ ರಿಟರ್ನ್ ನಲ್ಲಿ ಅರಭ ಕರಬ್ (ನೂರಾರು ಕೋಟಿ) ಗಿಂತ ಇನ್ನು ಹೆಚ್ಚು ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ. ನಾಲ್ಕಾರು ಕಡೆಯ ಮಕ್ಕಳನ್ನು ನೋಡಿದಾಗ ಎಲ್ಲರ ಹೃದಯದಲ್ಲಿ ಒಂದೇ ಸಂಕಲ್ಪವನ್ನು ನೋಡುತ್ತಿದ್ದಾರೆ, ಎಲ್ಲರ ನಯನಗಳಲ್ಲಿ ಇದನ್ನೇ ನೋಡುತ್ತಿದ್ದಾರೆ- ನಮಗೆ ಪರಮಾತ್ಮನ ಆರು ತಿಂಗಳಿನ ಹೋಂವರ್ಕ್ (ಮನೆ ಕೆಲಸ) ನೆನಪಿದೆ. ನಿಮ್ಮೆಲ್ಲರಿಗೂ ನೆನಪಿದೆ ಅಲ್ಲವೇ. ಮರೆತು ಹೋಗಿಲ್ಲ ಅಲ್ಲವೇ? ಪಾಂಡವರಿಗೆ ನೆನಪಿದೆಯೇ? ಚೆನ್ನಾಗಿ ನೆನಪಿದೆಯೇ? ಬಾಪ್‌ದಾದಾರವರು ಮತ್ತೆ ಮತ್ತೆ ಏಕೆ ನೆನಪು ತರಿಸುತ್ತಾರೆ? ಕಾರಣ? ಸಮಯವನ್ನು ನೋಡುತ್ತಿರುವಿರಿ, ಬ್ರಾಹ್ಮಣ ಆತ್ಮರು ಸ್ವಯಂನ್ನು ಸಹ ನೋಡುತ್ತಿರುವಿರಿ, ಮನಸ್ಸು ಯುವ ಅವಸ್ಥೆಯಲ್ಲಿ ಬರುತ್ತಾ ಹೋಗುತ್ತದೆ, ತನ್ನ(ಶರೀರ) ವೃದ್ಧ ಅವಸ್ಥೆಗೆ ಹೋಗುತ್ತದೆ. ಸಮಯ ಹಾಗೂ ಆತ್ಮರ ಕೂಗು ಚೆನ್ನಾಗಿ ಕೇಳಿಸುತ್ತಿದೆ! ಬಾಪ್‌ದಾದಾರವರು ನೋಡುತ್ತಿದ್ದರು- ಆತ್ಮರ ಕೂಗು ಹೃದಯದಲ್ಲಿ ವೃದ್ಧಿಯಾಗುತ್ತಾ ಹೋಗುತ್ತಿದೆ, ಹೇ ಸುಖದೇವ, ಹೇ ಶಾಂತಿದೇವ, ಹೇ ಸತ್ಯ ಸುಖದೇವ ಸ್ವಲ್ಪ ಅಂಜಲಿ ನಮಗೂ ಕೊಡಿ, ಯೋಚಿಸಿ ಕರೆಯುತ್ತಿರುವವರ ಲೈನ್ ಎಷ್ಟು ದೊಡ್ಡದಾಗಿದೆ! ನೀವೆಲ್ಲರೂ ತಂದೆಯ ಪ್ರತ್ಯಕ್ಷತೆ ಆದಷ್ಟು ಬೇಗ ಆಗಲಿ ಎಂದು ಯೋಚಿಸುತ್ತೀರಿ ಆದರೆ ಪ್ರತ್ಯಕ್ಷತೆ ಯಾವ ಕಾರಣದಿಂದ ನಿಂತಿದೆ? ನೀವೆಲ್ಲರೂ ನಾವು ತಂದೆಯ ಸಮಾನರಾಗಬೇಕು ಎಂಬ ಈ ಸಂಕಲ್ಪವನ್ನು ಮಾಡಿ ಹಾಗೂ ಹೃದಯದ ಆಸೆಯನ್ನಿಟ್ಟು, ನಿಮ್ಮ ಬಾಯಿಂದಲೂ ಹೇಳಿದಾಗ ಆಗುತ್ತದೆ. ಆಗಬೇಕಲ್ಲವೇ? ಆಗಬೇಕೆ? ಒಳ್ಳೆಯದು, ಹಾಗಾದರೆ ಏಕೆ ಆಗುತ್ತಿಲ್ಲ? ಬಾಪ್‌ದಾದಾರವರು ತಂದೆಯ ಸಮಾನರಾಗುವುದಕ್ಕಾಗಿ ಹೇಳಿದ್ದರು. ಏನಾಗಬೇಕು, ಹೇಗಾಗಬೇಕು ಎಂಬ ಈ ಎರಡು ಪ್ರಶ್ನೆಗಳು ಬರಲು ಸಾಧ್ಯವಿಲ್ಲ. ಏನು ಆಗಬೇಕು? ಉತ್ತರ ಇದೆ ಅಲ್ಲವೇ- ತಂದೆಯ ಸಮಾನರಾಗಬೇಕು. ಹೇಗೆ ಆಗಬೇಕು? ತಂದೆಯನ್ನು ಅನುಕರಿಸಬೇಕು- ಫುಟ್ ಸ್ಟೆಪ್ ಫಾದರ್, ಮದರ್( ತಂದೆ ತಾಯಿಯ ಹೆಜ್ಜೆಯಲ್ಲಿ ಹೆಜ್ಜೆ) ನಿರಾಕಾರ ತಂದೆ, ಸಾಕಾರ ತಾಯಿ. ಫಾಲೋ ಮಾಡಲು ಸಹ

ಬರುವುದಿಲ್ಲವೇ? ಇತ್ತೀಚಿನ ಅಂಧರು (ಕಣ್ಣು ಕಾಣಿಸದೆ ಇರುವವರು) ಸಹ ಅನುಕರಣೆ ಮಾಡುತ್ತಾರೆ. ನೋಡಲಾಗಿದೆ, ಇತ್ತೀಚೆಗೆ ಅವರು ಕೋಲಿನ ಶಬ್ದದ ಅನುಸಾರ, ಕೋಲನ್ನು ಫಾಲೋ ಮಾಡುತ್ತಾ ಮಾಡುತ್ತಾ ಎಲ್ಲಿಂದ ಎಲ್ಲಿಗೆ ತಲುಪಿ ಬಿಡುತ್ತಾರೆ. ನೀವಂತೂ ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ, ತ್ರಿನೇತ್ರಿ ಆಗಿದ್ದೀರಿ, ತ್ರಿಕಾಲದರ್ಶಿಯಾಗಿದ್ದೀರಿ. ಫಾಲೋ ಮಾಡುವುದು ನಿಮಗಾಗಿ ಯಾವ ದೊಡ್ಡ ವಿಷಯವಾಗಿದೆ! ದೊಡ್ಡ ವಿಷಯವಾಗಿದೆಯೇ? ಹೇಳಿ ದೊಡ್ಡ ವಿಷಯವಾಗಿದೆಯೇ? ದೊಡ್ಡ ವಿಷಯವಲ್ಲ, ಆದರೆ ಆಗಿ ಹೋಗುತ್ತದೆ. ಬಾಪ್‌ದಾದಾರವರು ಎಲ್ಲಾ ಜಾಗದಲ್ಲಿ ಸುತ್ತಾಡುತ್ತಾರೆ (ಚಕ್ಕರ್) ಹಾಕುತ್ತಾರೆ, ಸೇವಕೇಂದ್ರದಲ್ಲಿಯೂ, ಪ್ರವೃತ್ತಿಯಲ್ಲಿಯೂ(ಕುಟುಂಬದವರ ಹತ್ತಿರ) ಬರುತ್ತಾರೆ. ಬಾಪ್‌ದಾದಾರವರು ನೋಡಿದರು- ಪ್ರತಿಯೊಬ್ಬ ಬ್ರಾಹ್ಮಣ ಆತ್ಮರ ಬಳಿ, ಪ್ರತಿಯೊಂದು ಸೇವಾಕೇಂದ್ರದಲ್ಲಿ, ಪ್ರತಿಯೊಂದು ಪ್ರವೃತ್ತಿಯ ಸ್ಥಾನದಲ್ಲಿ ಅಲ್ಲಲ್ಲಿ ಬ್ರಹ್ಮಾಬಾಬಾರವರ ಚಿತ್ರಗಳನ್ನು ಬಹಳಷ್ಟು ಇಡಲಾಗಿದೆ. ಅವ್ಯಕ್ತ ಬಾಪ್‌ದಾದಾರವರದ್ದಾಗಿರಲಿ, ಬ್ರಹ್ಮಾ ಬಾಬಾರವರದಾಗಿರಲಿ ಹಲವಾರು ಕಡೆ ಚಿತ್ರಗಳೇ ಚಿತ್ರಗಳು ಕಾಣಿಸುತ್ತಿದ್ದವು. ಒಳ್ಳೆಯ ಮಾತಾಗಿದೆ. ಆದರೆ ಬಾಪ್‌ದಾದಾರವರು ಇದನ್ನು ಯೋಚಿಸುತ್ತಾರೆ- ಚಿತ್ರವನ್ನು ನೋಡಿ ಚರಿತ್ರೆಯಂತೂ ನೆನಪಿಗೆ ಬರುತ್ತದೆಯಲ್ಲವೇ! ಅಥವಾ ಕೇವಲ ಚಿತ್ರವನ್ನೇ ನೋಡುತ್ತೀರಾ? ಚಿತ್ರವನ್ನು ನೋಡಿ ಪ್ರೇರಣೆಯಂತೂ ಸಿಗುತ್ತದೆಯಲ್ಲವೇ? ಹಾಗಾದರೆ ಬಾಪ್‌ದಾದಾರವರು ಮತ್ತಿನ್ನೇನನ್ನು ಹೇಳುವುದಿಲ್ಲ ಕೇವಲ ಒಂದು ಶಬ್ದವನ್ನು ಹೇಳುತ್ತಾರೆ- ಅನುಕರಣೆ ಮಾಡಿ, ಅಷ್ಟೇ. ಯೋಚಿಸ ಬೇಡಿ. ಜಾಸ್ತಿ ಯೋಜನೆಗಳನ್ನು ತಯಾರು ಮಾಡಬೇಡಿ, ಇದನ್ನು ಮಾಡುವುದಿಲ್ಲ ಅದನ್ನು ಮಾಡುತ್ತೇವೆ, ಹೀಗಲ್ಲ ಹಾಗೆ, ಹಾಗಲ್ಲ ಹೀಗೆ. ಇಲ್ಲ, ಬಾಬಾರವರು ಏನನ್ನು ಮಾಡಿದ್ದಾರೆ, ಅದನ್ನು ಕಾಪಿ (ನಕಲು) ಮಾಡಬೇಕು, ಅಷ್ಟೇ. ಕಾಪಿ ಮಾಡಲು ಬರುವುದಿಲ್ಲವೇ? ಇತ್ತೀಚಿನ ಮನುಷ್ಯರು ಫೋಟೋ ಕಾಪಿ ಮಾಡುವುದಕ್ಕೂ ಸಹ ಮೆಷಿನ್ ತಯಾರು ಮಾಡಿಬಿಟ್ಟಿದ್ದಾರೆ. ತಯಾರು ಮಾಡಿದ್ದಾರಲ್ಲವೇ! ಇಲ್ಲಿ ಫೋಟೋ ಕಾಪಿ ಇದೆ ಅಲ್ಲವೇ, ಅವರು ಬ್ರಹ್ಮಾ ಬಾಬಾರವರ ಚಿತ್ರವನ್ನು ಇಟ್ಟಿದ್ದಾರೆ. ಭಲೆ ಇಡಿ, ಚೆನ್ನಾಗಿ ಇಡಿ, ದೊಡ್ಡ ದೊಡ್ಡದು ಇಡಿ. ಆದರೆ. ಫೋಟೋ ಕಾಪಿ ಅಂತೂ ಮಾಡಿ!

ಬಾಪ್‌ದಾದಾರವರು ಇಂದು ನಾಲ್ಕಾರು ಕಡೆಯಲ್ಲಿ ಸುತ್ತುಹಾಕುತ್ತಾ ಇದನ್ನೇ ನೋಡುತ್ತಿದ್ದರು, ಚಿತ್ರದೊಂದಿಗೆ ಪ್ರೀತಿ ಇದೆಯೇ ಅಥವಾ ಚರಿತ್ರೆಯೊಂದಿಗೆ ಪ್ರೀತಿ ಇದೆಯೇ? ಸಂಕಲ್ಪವೂ ಇದೆ, ಉಲ್ಲಾಸವೂ ಇದೆ, ಲಕ್ಷ್ಯವೂ ಇದೆ, ಇನ್ನೇನು ಬೇಕು? ಆಧಾರಗಳು ನೋಡಿದರು, ಯಾವುದೇ ವಸ್ತುವನ್ನು ಚೆನ್ನಾಗಿ ಶಕ್ತಿಶಾಲಿಯನ್ನಾಗಿ ಮಾಡುವುದಕ್ಕಾಗಿ ನಾಲ್ಕು ಮೂಲೆಯಿಂದ ಅದನ್ನು ಪಕ್ಕಾ ಮಾಡಲಾಗುತ್ತದೆ. 3 ಮೂಲೆಗಳಂತೂ ಪಕ್ಕಾ ಇದೆ, ಒಂದು ಮೂಲೆ ಇನ್ನೂ ಪಕ್ಕಾ ಆಗಬೇಕಾಗಿದೆ. ಸಂಕಲ್ಪವೂ ಇದೆ , ಉಲ್ಲಾಸವೂ ಇದೆ, ಲಕ್ಷ್ಯವೂ ಇದೆ, ಯಾರಿಗಾದರೂ ಕೇಳಿ ನೀವು ಏನು ಆಗಬೇಕು ಎಂದು? ಪ್ರತಿಯೊಬ್ಬರೂ ತಂದೆಯ ಸಮಾನರಾಗಬೇಕು ಎಂದು ಹೇಳುತ್ತಾರೆ. ಯಾರು ಸಹ ತಂದೆಗಿಂತ ಕಡಿಮೆಯಾಗಬೇಕು ಎಂದು ಹೇಳುವುದಿಲ್ಲ. ಸಮಾನರಾಗಬೇಕು ಎಂದೇ ಹೇಳುತ್ತಾರೆ. ಒಳ್ಳೆಯ ಮಾತಾಗಿದೆ. *ಒಂದು ಮೂಲೆಯನ್ನು ಬಲಶಾಲಿಯನ್ನಾಗಿ ಮಾಡುತ್ತೀರಿ ಆದರೆ ನಡೆಯುತ್ತಾ ನಡೆಯುತ್ತಾ, ಸಡಿಲವಾಗಿ ಬಿಡುತ್ತದೆ. ಅದಾಗಿದೆ ದೃಢತೆ. ಸಂಕಲ್ಪವಿದೆ, ಲಕ್ಷ್ಯವಿದೆ ಆದರೆ ಯಾವುದೇ ಪರ-ಸ್ಥಿತಿ ಬಂದುಬಿಡುತ್ತದೆ, ಸಾಧಾರಣ ಶಬ್ದದಲ್ಲಿ ಅದನ್ನು ನೀವು ಹೇಳುತ್ತೀರಿ, ವಿಷಯಗಳೇ ಆ ರೀತಿ ಬಂದುಬಿಡುತ್ತದೆ, ಅದು ದೃಢತೆಯನ್ನು ಸಡಿಲ ಮಾಡಿಬಿಡುತ್ತದೆ. ಧೃಡತೆ ಎಂದರೆ- ಪ್ರಾಣ ಹೋಗಲಿ, ಸಮಾಪ್ತಿಯಾಗಿ ಬಿಡಲಿ ಆದರೆ ಸಂಕಲ್ಪ ಹೋಗದಿರಲಿ. ಬಾಗುವ

ಪರಿಸ್ಥಿತಿ ಬರಲಿ, ಬದುಕಿದ್ದಂತೆಯೇ ಸಾಯಬೇಕಾಗಿ ಬರಲಿ, ತಮ್ಮನ್ನು ತಾವು ಪರಿವರ್ತನೆ ಮಾಡಿಕೊಳ್ಳಬೇಕಾಗಲಿ, ಸಹನೆ ಮಾಡಬೇಕಾಗಲಿ, ಅನ್ಯರಿಂದ ಮಾತುಗಳನ್ನು ಕೇಳಬೇಕಾಗಿ ಬರಲಿ ಆದರೆ ಸಂಕಲ್ಪ ಹೋಗದಿರಲಿ. ಇದಕ್ಕೆ ದೃಢತೆ ಎಂದು ಹೇಳಲಾಗುತ್ತದೆ. ಚಿಕ್ಕ ಚಿಕ್ಕ ಮಕ್ಕಳು ಓಂ ನಿವಾಸದಲ್ಲಿ ಬರುತ್ತಿದ್ದಾಗ- ಬ್ರಹ್ಮಾ ಬಾಬಾರವರು ಅವರಿಗೆ ರಮಣಿಕತೆಯಲ್ಲಿ ನೆನಪು ತರಿಸುತ್ತಿದ್ದರು, ಪಕ್ಕಾ ಮಾಡಿಸುತ್ತಿದ್ದರು- ಇಷ್ಟು ಇಷ್ಟು ನೀರು ಕುಡಿಯಬಲ್ಲಿರಾ, ಇಷ್ಟು ಮೆಣಸನ್ನು ತಿನ್ನಬಲ್ಲಿರಾ, ಭಯ ಪಡುವುದಿಲ್ಲ ತಾನೇ? ನಂತರ ಕೈಗಳನ್ನು ಕಣ್ಣುಗಳ ಮುಂದೆ ಇಡುತ್ತಿದ್ದರು... ಹೀಗೆ ಬ್ರಹ್ಮಾ ಬಾಬಾ ಚಿಕ್ಕ ಚಿಕ್ಕ ಮಕ್ಕಳನ್ನು ಪಕ್ಕಾ ಮಾಡಿಸುತ್ತಿದ್ದರು, ಎಷ್ಟೇ ಸಮಸ್ಯೆಗಳು ಬರಲಿ, ಸಂಕಲ್ಪದ ಕಣ್ಣು ಅಲುಗಾಡದಿರಲಿ. ಅವರಿಗಂತೂ ಕೆಂಪು ಮೆಣಸಿನಕಾಯಿ ನೀರಿನ ಮಡಿಕೆಯನ್ನು ಕೊಡುತ್ತಿದ್ದರು. ಚಿಕ್ಕ ಮಕ್ಕಳಾಗಿದ್ದರಲ್ಲವೇ. ನೀವಂತೂ ಈಗ ಎಲ್ಲರೂ ದೊಡ್ಡವರಾಗಿದ್ದೀರಿ, ಬಾಪ್‌ದಾದಾರವರು ಇಂದು ಸಹ ಮಕ್ಕಳೊಂದಿಗೆ ಕೇಳುತ್ತಾರೆ- ನಿಮಗೆ ದೃಢ ಸಂಕಲ್ಪವಿದೆಯೇ? ಸಂಕಲ್ಪದಲ್ಲಿ ದೃಢತೆ ಇದೆಯೇ- ತಂದೆಯ ಸಮಾನ ಆಗಲೇಬೇಕು? ಆಗಬೇಕು ಅಲ್ಲ, ಆಗಲೇಬೇಕು. ಒಳ್ಳೆಯದು, ಇದರಲ್ಲಿ ಕೈ ಅಲುಗಾಡಿಸಿ. ಟಿವಿಯವರು ನೋಡಿಕೊಳ್ಳಿ. ಟಿವಿ ಕೆಲಸದಲ್ಲಿ ಬರಬೇಕು ಅಲ್ಲವೇ! ದೊಡ್ಡ ದೊಡ್ಡ ಕೈಯೆತ್ತಿ. ಒಳ್ಳೆಯದು ಮಾತೆಯರು ಸಹ ಎತ್ತುತ್ತಿದ್ದಾರೆ. ಹಿಂದೆ ಕುಳಿತವರು ಇನ್ನು ಉದ್ದ ಕೈ ಎತ್ತಿ. ಬಹಳ ಒಳ್ಳೆಯದು. ಕ್ಯಾಬಿನ್ನವರು ಎತ್ತುತ್ತಿಲ್ಲ. ಕ್ಯಾಬಿನ್ ಅವರಂತೂ ನಿಮಿತ್ತರಾಗಿದ್ದೀರಿ, ಒಳ್ಳೆಯದು ಸ್ವಲ್ಪ ಸಮಯಕ್ಕಾಗಿ ಕೈಯೆತ್ತಿ ಬಾಪ್‌ದಾದಾರವರನ್ನು ಖುಷಿಪಡಿಸುತ್ತಿದ್ದೀರಿ.

ಈಗ ಬಾಪ್‌ದಾದಾರವರು ಕೇವಲ ಒಂದು ವಿಷಯವನ್ನು ಮಕ್ಕಳಿಂದ ಮಾಡಬಯಸುತ್ತಾರೆ, ಹೇಳಲು ಬಯಸುವುದಿಲ್ಲ ಆದರೆ, ಮಾಡಿಸಬೇಕೆಂದು ಬಯಸುತ್ತಾರೆ. ಕೇವಲ ತಮ್ಮ ಮನಸ್ಸಿನಲ್ಲಿ ದೃಢತೆಯನ್ನು ತೆಗೆದುಕೊಂಡು ಬನ್ನಿ, ಚಿಕ್ಕ ಮಾತಿನಲ್ಲಿ ನಿಮ್ಮ ಮನಸ್ಸನ್ನು ಸಡಿಲಗೊಳಿಸಬೇಡಿ. ಯಾರಾದರೂ ಇನ್ಸಲ್ಟ್ ಮಾಡಲಿ, ಯಾರೇ ತಿರಸ್ಕಾರ ಮಾಡಲಿ, ಯಾರೇ ಅಪಮಾನ ಮಾಡಲಿ, ನಿಂದನೆ ಮಾಡಲಿ, ಯಾರೇ ದುಃಖ ಕೊಡಲಿ ಆದರೆ ನಿಮ್ಮ ಶುಭ ಭಾವನೆ ಎಂದೂ ಸಹ ಅಳಿಸಿ ಹೋಗದಿರಲಿ. ನೀವು ಮಾಯೆಗೆ ಚಾಲೆಂಜ್ ಮಾಡುತ್ತೀರಿ, ಪ್ರಕೃತಿಯನ್ನು ಪರಿವರ್ತನೆ ಮಾಡುವವರು ವಿಶ್ವ ಪರಿವರ್ತಕರಾಗಿದ್ದೀರಿ, ನಿಮ್ಮ ಕರ್ತವ್ಯವಂತು ನೆನಪಿದೆಯಲ್ಲವೇ! ಒಂದು ವೇಳೆ ಯಾರಾದರೂ ತಮ್ಮ ಸಂಸ್ಕಾರದ ವಶ ನಿಮಗೆ ದುಃಖ ಕೊಟ್ಟರೆ, ಪೆಟ್ಟು ಮಾಡಿದರೆ, ಏರುಪೇರು ಮಾಡಿದರೆ, ನೀವು ದುಃಖದ ಮಾತನ್ನು ಸುಖದಲ್ಲಿ ಪರಿವರ್ತನೆ ಮಾಡಲು ಸಾಧ್ಯವೇ? ಇನ್ಸಲ್ಟನ್ನು (ಅಪಮಾನವನ್ನು) ಸಹನೆ ಮಾಡಲು ಸಾಧ್ಯವೇ? ಬೈಗುಳವನ್ನು ಗುಲಾಬಿಯನ್ನಾಗಿ ಮಾಡಲು ಸಾಧ್ಯವೇ? ಸಮಸ್ಯೆಯನ್ನು ತಂದೆಯ ಸಮಾನರಾಗುವ ಸಂಕಲ್ಪದಲ್ಲಿ ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ನಿಮ್ಮೆಲ್ಲರಿಗೂ ನೆನಪಿದೆ- ತಾವು ಬ್ರಾಹ್ಮಣ ಜನ್ಮದಲ್ಲಿ ಬಂದಿರಿ ಹಾಗೂ ನಿಶ್ಚಯ ಮಾಡಿದಿರಿ, ನಿಮಗೆ ಒಂದು ಸೆಕೆಂಡ್ ಬೇಕಾಗಿರಬಹುದು ಅಥವಾ ಒಂದು ತಿಂಗಳು ಆದರೆ ಎಂದಿನಿಂದ ನೀವು ನಿಶ್ಚಯ ಮಾಡಿದಿರಿ, ಹೃದಯ ಹೇಳಿತು “ನಾನು ಬಾಬಾರವರ ಮಗು, ಬಾಬಾ ನನ್ನವರು”. ಸಂಕಲ್ಪ ಮಾಡಿದಿರಿ ಅಲ್ಲವೇ, ಅಲ್ಲವೇ! ಅಂದಿನಿಂದ ನೀವು ಮಾಯೆಗೆ ಚಾಲೆಂಜ್ ಮಾಡಿದ್ದೀರಿ- ನಾನು ಮಾಯಾಜೀತ್ ಆಗುತ್ತೇನೆ. ಈ ಚಾಲೆಂಜ್ ಅನ್ನು ಮಾಯೆಯೊಂದಿಗೆ ಮಾಡಿದ್ದೀರಲ್ಲವೇ? ಮಾಯಾಜೀತ್ ಆಗಬೇಕೆ, ಇಲ್ಲವೇ? ಮಾಯಾಜೀತ್ ನೀವೇ ಆಗಿದ್ದೀರಲ್ಲವೇ ಅಥವಾ ಬೇರೆಯವರು ಆಗಬೇಕಾಗಿದೆಯೇ? ಯಾವಾಗ ಮಾಯೆಗೆ ಚಾಲೆಂಜ್ ಮಾಡಿದ್ದೀರಿ ಎಂದರೆ ಈ ಸಮಸ್ಯೆಗಳು, ಈ ವಿಷಯಗಳು, ಈ ಏರುಪೇರುಗಳು, ಮಾಯೆಯ ರಾಯಲ್ ರೂಪಗಳಾಗಿವೆ. ಮಾಯೆ ಬೇರೆ ಯಾವುದೊ ರೂಪದಲ್ಲಿ

ಬರುವುದಿಲ್ಲ. ಈ ರೂಪಗಳಲ್ಲಿಯೇ ಮಾಯಾಜೀತ್ ಆಗಬೇಕು. ವಿಷಯಗಳು ಬದಲಾಗುವುದಿಲ್ಲ, ಸೇವಾಕೇಂದ್ರ ಬದಲಾಗುವುದಿಲ್ಲ, ಸ್ಥಾನ ಬದಲಾಗುವುದಿಲ್ಲ, ಆತ್ಮರೂ ಬದಲಾಗುವುದಿಲ್ಲ, ನಾವೇ ಬದಲಾಗಬೇಕು. ನಿಮ್ಮ ಸ್ಲೋಗನ್ ಎಲ್ಲರಿಗೂ ಬಹಳ ಪ್ರಿಯವೆನಿಸುತ್ತದೆ- ಬದಲಾಗಿ ತೋರಿಸಬೇಕು, ಸೇಡು ಇಟ್ಟುಕೊಳ್ಳಬಾರದು, ಬದಲಾವಣೆಯಾಗಬೇಕು. ಇದಂತೂ ಹಳೆಯ ಸ್ಲೋಗನ್ ಆಗಿದೆ. ಹೊಸ ಹೊಸ ರೂಪ, ರಾಯಲ್ ರೂಪದಲ್ಲಿ ಮಾಯೆ ಇನ್ನಷ್ಟು ಬರುವುದು, ಗಾಬರಿಯಾಗಬೇಡಿ. ಬಾಪ್‌ದಾದಾರವರು ಅಂಡರ್ ಲೈನ್ ಮಾಡಿಸುತ್ತಿದ್ದಾರೆ- ಮಾಯೆ ಇಂತಹ-ಇಂತಹ ರೂಪದಲ್ಲಿ ಬರಲಿದೆ, ಬರುತ್ತಿದೆ. ಇದು ಸಹ ಮಾಯೆಯಾಗಿದೆ ಎಂದು ಮಕ್ಕಳು ಅನುಭವವೇ ಮಾಡುವುದಿಲ್ಲ ಮತ್ತು ಇಲ್ಲ ದಾದಿ ನೀವು ತಿಳಿದುಕೊಂಡಿರಲಿಲ್ಲ. ಇದು ಮಾಯೆಯಲ್ಲ ಎಂದು ಹೇಳುತ್ತಾರೆ. ಇದಂತೂ ಸತ್ಯ ಮಾತಾಗಿದೆ. ಇನ್ನಷ್ಟು ರಾಯಲ್ ರೂಪದಲ್ಲಿ ಬರಲಿದೆ, ಹೆದರಬೇಡಿ. ಏಕೆ? ನೋಡಿ, ಯಾವುದೇ ಶತ್ರು ಸೋಲಲಿ ಅಥವಾ ವಿಜಯಿಯಾಗಲಿ, ಅವರ ಬಳಿ ಏನೆಲ್ಲಾ ಅಸ್ತ್ರಶಸ್ತ್ರಗಳಿರುತ್ತವೆಯೋ, ಅದನ್ನು ಬಳಸುತ್ತಾರೆಯೋ ಅಥವಾ ಇಲ್ಲವೋ? ಬಳಸುತ್ತಾರಲ್ಲವೇ? ಅಂತ್ಯವಂತೂ ಆಗಲೇಬೇಕು ಆದರೆ ಎಷ್ಟು ಅಂತ್ಯ ಸಮೀಪ ಬರುತ್ತದೆಯೋ ಅಷ್ಟು ಅದು ಹೊಸ ಹೊಸ ರೂಪದಿಂದ ತನ್ನ ಅಸ್ತ್ರಶಸ್ತ್ರಗಳನ್ನು ಉಪಯೋಗಿಸುತ್ತಿದೆ ಮತ್ತು ಉಪಯೋಗಿಸುತ್ತದೆ. ನಂತರ ನಿಮ್ಮ ಕಾಲಿಗೆ ಬಾಗುವುದು. ಮೊದಲು ನಿಮ್ಮನ್ನು ಬಾಗಿಸುವ ಪ್ರಯತ್ನಪಡುವುದು, ನಂತರ ಸ್ವಯಂ ಬಾಗುವುದು. ಬಾಪ್‌ದಾದಾರವರು ಕೇವಲ ಒಂದೇ ಶಬ್ದವನ್ನು ಮತ್ತೆ ಮತ್ತೆ ಅಂಡರ್ ಲೈನ್ ಮಾಡಿಸುತ್ತಿದ್ದಾರೆ. “ತಂದೆಯ ಸಮಾನರಾಗಬೇಕು”- ನಮ್ಮ ಈ ಲಕ್ಷ್ಯದ ಸ್ವಮಾನದಲ್ಲಿ ಇರಿ ಹಾಗೂ ಸನ್ಮಾನ(ಗೌರವ) ಕೊಡುವುದು ಅರ್ಥಾತ್ ಗೌರವ ಪಡೆಯುವುದು, ತೆಗೆದುಕೊಳ್ಳುವುದರಿಂದ ಸಿಗುವುದಿಲ್ಲ, ಕೊಡುವುದೇ ಪಡೆಯುವುದಾಗಿದೆ. ಇತರರು ಗೌರವ ಕೊಡಲಿ ಎನ್ನುವುದು ಯಥಾರ್ಥವಲ್ಲ ಕೊಡುವುದೇ ಪಡೆಯುವುದಾಗಿದೆ. ದೇಹ-ಅಭಿಮಾನದ ಸ್ವಮಾನವಲ್ಲ, ಬ್ರಾಹ್ಮಣ ಜೀವನದ ಸ್ವಮಾನ, ಶ್ರೇಷ್ಠ ಆತ್ಮನ ಸ್ವಮಾನ, ಸಂಪನ್ನತೆಯ ಸ್ವಮಾನ. ಎಂದರೆ ಸ್ವಮಾನ ಹಾಗೂ ಸನ್ಮಾನ ತೆಗೆದುಕೊಳ್ಳುವುದಲ್ಲ ಕೊಡುವುದು, ಕೊಡುವುದೇ ತೆಗೆದುಕೊಳ್ಳುವುದಾಗಿದೆ- ಈ ಎರಡು ವಿಷಯಗಳಲ್ಲಿ ದೃಢತೆಯನ್ನು ಇಟ್ಟುಕೊಳ್ಳಿ. ನಿಮ್ಮ ದೃಢತೆಯನ್ನು ಯಾರೇ ಎಷ್ಟೇ ಅಲುಗಾಡಿಸಲಿ, ದೃಢತೆಯನ್ನು ಸಡಿಲಗೊಳಿಸಬೇಡಿ, ಬಲಶಾಲಿಯನ್ನಾಗಿ ಮಾಡಿ. ಅಚಲರಾಗಿ. ಆಗ ಬಾಪ್‌ದಾದಾರವರೊಂದಿಗೆ ಯಾವ ಪ್ರಾಮಿಸ್ ಮಾಡಿದ್ದೀರಿ, ಆರು ತಿಂಗಳಿನ ಪ್ರತಿಜ್ಞೆಯಂತು ನೆನಪಿದೆ ಅಲ್ಲವೇ. ಇನ್ನೂ ಕೇವಲ 15 ದಿನಗಳು ಮುಗಿದಿವೆ. ಇನ್ನು ಐದೂವರೆ ತಿಂಗಳು ಬಾಕಿ ಇದೆ ಎಂದು ಯೋಚಿಸಬೇಡಿ. ಅಮೃತವೇಳೆ ಆತ್ಮಿಕ ವಾತಾಲಾಪವನ್ನು ಮಾಡುವಾಗ, ಅಮೃತ ವೇಳೆ ಆತ್ಮಿಕ ವರ್ತಲಾಪವನ್ನಂತೂ ಮಾಡುತ್ತಿರಲ್ಲವೇ, ಆಗ ಬಾಪ್‌ದಾದಾರವರಿಗೆ ಬಹಳ ಒಳ್ಳೆಯ ವಿಷಯಗಳನ್ನು ಹೇಳುತ್ತಾರೆ. ತಮ್ಮ ವಿಷಯಗಳನ್ನು ತಿಳಿದಿದ್ದೀರಲ್ಲವೇ? ಎಂದ ಮೇಲೆ ಈಗ ದೃಢತೆಯನ್ನು ತಮ್ಮದಾಗಿಸಿಕೊಳ್ಳಿ. ಉಲ್ಟಾ ವಿಷಯಗಳಲ್ಲಿ ದೃಢತೆ ಇಡುವುದಲ್ಲ. ಕ್ರೋಧ ಮಾಡಲೇಬೇಕು, ನನ್ನಲ್ಲಿ ದೃಢತೆ ಇದೆ, ಈ ರೀತಿ ಅಲ್ಲ. ತಿಳಿಯಿತೇ? ಇತ್ತೀಚಿಗೆ ಬಾಪ್‌ದಾದಾರವರ ಬಳಿ ರೆಕಾರ್ಡಿನಲ್ಲಿ ಬಹುತೇಕ ಕ್ರೋಧದ ಭಿನ್ನ-ಭಿನ್ನ ಪ್ರಕಾರದ ರಿಪೋರ್ಟ್ ತಲುಪುತ್ತದೆ. ಮಹಾ ರೂಪದಲ್ಲಿ ಕಡಿಮೆ ಆದರೆ ಅಂಶ ರೂಪದಲ್ಲಿ ಭಿನ್ನ ಭಿನ್ನ ಪ್ರಕಾರದ ಕ್ರೋಧದ ರೂಪ ಜಾಸ್ತಿ ಇದೆ. ಇದರ ಮೇಲೆ ಕ್ಲಾಸ್ ಮಾಡಿಸಬೇಕಾಗಿದೆ- ಕ್ರೋದದ ಎಷ್ಟು ರೂಪಗಳಿವೆ? ನಂತರ ಏನು ಹೇಳುತ್ತಾರೆ ನಮ್ಮ ಭಾವ ಈ ರೀತಿ ಇರಲಿಲ್ಲ, ನಮ್ಮ ಭಾವನೆಯು ಈ ರೀತಿ ಇರಲಿಲ್ಲ, ಹಾಗೆಯೇ ಹೇಳಿಬಿಟ್ಟೆ ಎಂದು ಹೇಳುತ್ತಾರೆ. ಇದರ ಮೇಲೆ ಕ್ಲಾಸ್ ಮಾಡಿಸಬೇಕು.

ಟೀಚರ್ಸ್ ಬಹಳಷ್ಟು ಜನ ಬಂದಿದ್ದೀರಿ ಅಲ್ಲವೇ? (1200 ಶಿಕ್ಷಕಿಯರು ಬಂದಿದ್ದಾರೆ) 1200 ಎಲ್ಲರೂ ದೃಢ ಸಂಕಲ್ಪ ಮಾಡಿಕೊಳ್ಳಿ ಆಗ ನಾಳೆಯೇ ಪರಿವರ್ತನೆಯಾಗಿ ಬಿಡಬಹುದು. ನಂತರ ಇಷ್ಟೊಂದು ಆಕ್ಸಿಡೆಂಟ್ ಆಗುವುದಿಲ್ಲ, ಎಲ್ಲರೂ ಬಚಾವಾಗಿ ಬಿಡುವಿರಿ. ಟೀಚರ್ಸ್ ಕೈ ಎತ್ತಿ. ಬಹಳ ಇದ್ದಾರೆ. ಶಿಕ್ಷಕಿಯರು ಎಂದರೆ ನಿಮಿತ್ತ ತಳಪಾಯ. ಒಂದು ವೇಳೆ ಫೌಂಡೇಶನ್ (ತಳಪಾಯ) ಪಕ್ಕಾ ಅರ್ಥಾತ್ ದೃಢವಾಗಿದ್ದರೆ ವೃಕ್ಷವು ಸ್ವತಹವಾಗಿಯೇ. ಸರಿಯಾಗಿರುವುದು ಇತ್ತೀಚೆಗೆ ಸಂಸಾರದಲ್ಲಾಗಿರಲಿ ಬ್ರಾಹ್ಮಣ ಸಂಸಾರದಲ್ಲಾಗಿರಲಿ ಧೈರ್ಯ ಹಾಗೂ ಸತ್ಯವಾದ ಪ್ರೀತಿ ಬೇಕಾಗಿದೆ. ಸ್ವಾರ್ಥದ ಪ್ರೀತಿ ಅಲ್ಲ. ಸಮಯ ಪ್ರಮಾಣದ ಪ್ರೀತಿ ಅಲ್ಲ. ಒಂದು ಸತ್ಯವಾದ ಪ್ರೀತಿ ಹಾಗೂ ಎರಡನೆಯದು ಧೈರ್ಯ, ತಿಳಿಯಿರಿ 95% ಒಂದು ವೇಳೆ ಯಾರಾದರೂ ಸಂಸ್ಕಾರದ ವಶ ಪರವಶರಾಗಿ ಏರುಪೇರು ಮಾಡಿದರೂ ಸಹ 5% ಒಳ್ಳೆಯದು ಮಾಡುತ್ತಾರೆ, ನೀವು ಆಗ ಅವರ 5% ಒಳ್ಳೆಯತನವನ್ನು ತೆಗೆದುಕೊಂಡು ಅವರಲ್ಲಿ ಧೈರ್ಯವನ್ನು ತುಂಬಿರಿ, ಅವರಿಗೆ ಹೇಳಿ ಇದೆಲ್ಲವನ್ನು ತುಂಬಾ ಚೆನ್ನಾಗಿ ಮಾಡಿದ್ದೀರಿ ಬಾಕಿ ಇದನ್ನು ಸರಿ ಮಾಡಿಕೊಳ್ಳಿರಿ, ಆಗ ಅವರಿಗೆ ಫೀಲ್ ಆಗುವುದಿಲ್ಲ. ಒಂದು ವೇಳೆ ಹೀಗೇಕೆ ಮಾಡಿದೆ, ಹೀಗೆ ಮಾಡಲಾಗುವುದಿಲ್ಲ, ಈ ರೀತಿ ಮಾಡಲು ಸಾಧ್ಯವಿಲ್ಲ ಈ ರೀತಿ ಹೇಳಿದರೆ ಅವರು ಮೊದಲೇ ಸಂಸ್ಕಾರದ ವಶ ಆಗಿದ್ದಾರೆ, ಬಲಹೀನರಾಗಿದ್ದಾರೆ ಮತ್ತೆ ಇನ್ನಷ್ಟು ನರ್ವಸ್ (ನಡುಗುತ್ತಾರೆ) ಆಗುತ್ತಾರೆ ಮತ್ತು ಮುಂದುವರೆಯಲು ಸಾಧ್ಯವಾಗುವುದಿಲ್ಲ. ಐದು ಪರ್ಸೆಂಟೇಜ್ ಮೊದಲು ಧೈರ್ಯವನ್ನು ತರಿಸಿ, ನಿಮ್ಮಲ್ಲಿ ಈ ಮಾತು ಬಹಳ ಒಳ್ಳೆಯದಿದೆ. ಇದನ್ನು ನೀವು ತುಂಬಾ ಚೆನ್ನಾಗಿ ಮಾಡಬಹುದು, ನಂತರ ಅವರಿಗೆ ಒಂದು ವೇಳೆ ಸಮಯ ಹಾಗೂ ಅವರ ಸ್ವರೂಪವನ್ನು ತಿಳಿದುಕೊಂಡು ಅವರಿಗೆ ಆ ಬಲಹೀನತೆಯ ವಿಷಯವನ್ನು ಹೇಳಿದರೆ ಅವರು ಪರಿವರ್ತನೆ ಆಗಿಬಿಡುವರು. ಧೈರ್ಯವನ್ನು ಕೊಡಿ, ಪರವಶ ಆತ್ಮರಲ್ಲಿ ಧೈರ್ಯವಿರುವುದಿಲ್ಲ. ತಂದೆ ನಿಮ್ಮನ್ನು ಹೇಗೆ ಪರಿವರ್ತನೆ ಮಾಡಿದರು? ನಿಮ್ಮ ಕೊರತೆಗಳನ್ನು ಹೇಳಿದರೆ? ನೀವು ವಿಕಾರಿಯಾಗಿದ್ದೀರಿ, ನೀವು ಕೊಳಕಾಗಿದ್ದೀರಿ, ಎಂದು ಹೇಳಿದರೇ? ನಿಮಗೆ ಸ್ಮೃತಿ ತರಿಸಿದರು ನೀವು ಆತ್ಮರಾಗಿದ್ದೀರಿ ಹಾಗೂ ಈ ಶ್ರೇಷ್ಠ ಸ್ಮೃತಿಯಿಂದ ನಿಮ್ಮಲ್ಲಿ ಸಮರ್ಥತೆ ಬಂತು, ಪರಿವರ್ತನೆ ಮಾಡಿದರು. ಧೈರ್ಯದಿಂದ ಸ್ಮೃತಿ ತರಿಸಿ. ಸ್ಮೃತಿ ಸಮರ್ಥತೆಯನ್ನು ಸ್ವತಹವಾಗಿ ತರಿಸುತ್ತದೆ. ತಿಳಿಯಿತೇ. ಎಂದ ಮೇಲೆ ಈಗಂತೂ ಸಮಾನರಾಗುವಿರಿ ಅಲ್ಲವೇ? ಕೇವಲ ಒಂದು ಅಕ್ಷರವನ್ನು ನೆನಪಿಟ್ಟುಕೊಳ್ಳಿ - ಫಾಲೋ ಫಾದರ್ & ಮದರ್ (ತಂದೆಯನ್ನು ಹಾಗೂ ತಾಯಿಯನ್ನು ಅನುಸರಿಸಿ) ತಂದೆ ಏನು ಮಾಡಿದ್ದರೋ ಅದನ್ನು ಮಾಡಬೇಕು. ಅಷ್ಟೇ ಹೆಜ್ಜೆಯ ಮೇಲೆ ಹೆಜ್ಜೆ ಇಡಬೇಕು. ಆಗ ಸಮಾನರಾಗುವುದು ಸಹಜವಾಗಿ ಅನುಭವವಾಗುವುದು. ಡ್ರಾಮಾ ಚಿಕ್ಕ ಚಿಕ್ಕ ಆಟವನ್ನು ತೋರಿಸುತ್ತಾ ಇರುವುದು. ಆಶ್ಚರ್ಯದ ಚಿಹ್ನೆಯಂತು ಬರುವುದಿಲ್ಲ ತಾನೇ? ಒಳ್ಳೆಯದು.

ಅನೇಕ ಮಕ್ಕಳ ಕಾರ್ಡ್, ಪತ್ರ, ಹೃದಯದ ಗೀತೆ ಬಾಪ್‌ದಾದಾರವರ ಬಳಿಗೆ ತಲುಪಿದೆ. ಎಲ್ಲರೂ ಹೇಳುತ್ತಾರೆ ನಮ್ಮ ನೆನಪು ಪ್ರೀತಿಯನ್ನು ಸಹ ಕೊಡಿ, ನಮ್ಮ ನೆನಪನ್ನು ಸಹ ಕೊಡಿ. ಅಂದಮೇಲೆ ಬಾಬಾರವರು ಹೇಳುತ್ತಾರೆ ನಮ್ಮ ನೆನಪು, ಪ್ರೀತಿಯನ್ನು ಸಹ ಕೊಟ್ಟುಬಿಡಿ. ನೆನಪಂತೂ ತಂದೆಯು ಸಹ ಮಾಡುತ್ತಾರೆ, ಮಕ್ಕಳು ಮಾಡುತ್ತಾರೆ, ಏಕೆಂದರೆ ಈ ಚಿಕ್ಕ ಸಂಗಮ ಯುಗದಲ್ಲಿಯೇ ಬಾಪ್‌ದಾದಾರವರು ಹಾಗೂ ಮಕ್ಕಳು, ಇನ್ನು ಯಾವುದೇ ವಿಸ್ತಾರವಂತು ಇಲ್ಲವೇ ಇಲ್ಲ. ಎಂದ ಮೇಲೆ ಯಾರು ನೆನಪಿಗೆ ಬರುತ್ತಾರೆ? ಮಕ್ಕಳಿಗೆ ತಂದೆ, ತಂದೆಗೆ ಮಕ್ಕಳು. ಎಂದ ಮೇಲೆ ದೇಶ ವಿದೇಶದ ಮಕ್ಕಳಿಗೆ ಬಹಳ ಬಹಳ ಬಹಳ ಬಹಳ ಪ್ರೀತಿಯನ್ನು ಕೊಡುತ್ತಾರೆ. ಒಳ್ಳೆಯದು.

**ನಾಲ್ಕಾರು ಕಡೆಯ ಬ್ರಾಹ್ಮಣ ಸಂಸಾರದ ವಿಶೇಷ ಆತ್ಮರಿಗೆ, ಸದಾ ದೃಢತೆಯ ಮೂಲಕ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಫಲತೆಯ ನಕ್ಷತ್ರಗಳಿಗೆ, ಸದಾ ಸ್ವಯಂನ್ನು ಸಂಪನ್ನ ಮಾಡಿಕೊಂಡು ಆತ್ಮರ ಕರೆಯನ್ನು ಪೂರ್ಣಗೊಳಿಸುವಂತಹ ಸಂಪನ್ನ ಆತ್ಮರಿಗೆ, ಸದಾ ನಿರ್ಬಲರಿಗೆ, ಪರವಶ ಆತ್ಮರಿಗೆ ತಮ್ಮ ಧೈರ್ಯದ ವರದಾನದ ಮೂಲಕ ಧೈರ್ಯವನ್ನು ಕೊಡುವಂತಹ, ತಂದೆಯ ಸಹಯೋಗದ ಪಾತ್ರಧಾರಿ ಆತ್ಮರಿಗೆ, ಸದಾ ವಿಶ್ವ ಪರಿವರ್ತಕರಾಗಿ ಸ್ವಪರಿವರ್ತನೆಯಿಂದ ಮಾಯೆ, ಪ್ರಕೃತಿ ಹಾಗೂ ಬಲಹೀನ ಆತ್ಮರನ್ನು ಪರಿವರ್ತನೆ ಮಾಡುವಂತಹ ಪರಿವರ್ತಕ ಆತ್ಮರಿಗೆ, ಬಾಪ್‌ದಾದಾರವರ ನಾಲ್ಕಾರು ಕಡೆಯ ಚಿಕ್ಕ ಸಂಸಾರದ ಸರ್ವ ಆತ್ಮರಿಗೆ ಸಮ್ಮುಖ ಬಂದಿರುವಂತಹ ಶ್ರೇಷ್ಠ ಆತ್ಮರಿಗೆ ಲಕ್ಷ-ಕೋಟಿಯಷ್ಟು ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 25-11-2000.

***ತಂದೆಯ ಸಮಾನರಾಗಲು ಎರಡು ವಿಷಯಗಳ ದೃಢತೆಯನ್ನು ಇಟ್ಟುಕೊಳ್ಳಿರಿ- ಸ್ವಮಾನದಲ್ಲಿ ಇರಬೇಕು ಹಾಗೂ ಎಲ್ಲರಿಗೂ ಸನ್ಮಾನ(ಗೌರವ) ಕೊಡಬೇಕು.***

ಎಷ್ಟೇ ಸಮಸ್ಯೆಗಳು ಬಂದರೂ ಸಂಕಲ್ಪವು ಏರುಪೇರಾಗಬಾರದು. ಮಾಯೆಯು ಅಂತ್ಯವಾಗಲೇಬೇಕು. ಆದರೆ ಅಂತಿಮ ಎಷ್ಟು ಸಮೀಪ ಬರುತ್ತದೆಯೋ ಅಷ್ಟು ಅದು ಹೊಸ ಹೊಸ ರೂಪಗಳೊಂದಿಗೆ ತನ್ನ ಅಸ್ತ್ರ ಶಸ್ತ್ರಗಳನ್ನು ಉಪಯೋಗಿಸುತ್ತಿದೆ ಮತ್ತು ಉಪಯೋಗಿಸುತ್ತದೆ ಸಹ. ಆನಂತರ ನಿಮ್ಮ ಪಾದಗಳ ಮೇಲೆ ಬೀಳುತ್ತದೆ. ಮೊದಲು ನಿಮ್ಮನ್ನು ಬಾಗಿಸಲು ಪ್ರಯತ್ನಿಸುತ್ತದೆ ನಂತರ ಸ್ವಯಂ ಬಾಗುತ್ತದೆ. ಎಂದು ತಿಳಿಸುತ್ತಾ ಬಾಪ್‌ದಾದಾ ತನ್ನ ಪ್ರಿಯಾತಿ ಪ್ರಿಯವಾದ, ಮಧುರಾತಿ ಮಧುರವಾದ ಬ್ರಾಹ್ಮಣ ಪ್ರಪಂಚದೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು .

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ದಿವ್ಯ ಬುದ್ಧಿ, ದಿವ್ಯ ನೇತ್ರದಿಂದ ಪರಮಾತ್ಮನನ್ನು ಗುರುತಿಸಿರುವ ವಿಶೇಷ ಆತ್ಮ.

2. ತಂದೆಯನ್ನು(ನಿರಾಕಾರನು), ತಾಯಿಯನ್ನು(ಸಾಕಾರ ಬ್ರಹ್ಮಾ ತಂದೆಯನ್ನು) ಅನುಸರಿಸಿ ನಾನು ತಂದೆ ಸಮಾನವಾಗುವ ಮಾಸ್ಟರ್ ಸರ್ವ ಶಕ್ತಿವಂತನು, ತ್ರಿನೇತ್ರಿ, ತ್ರಿಕಾಲ ದರ್ಶಿ.

3. ನಾನು ಸಾಯಬೇಕಾಗಿ ಬಂದರೂ, ನನ್ನನ್ನು ನಾನು ಪರಿವರ್ತನೆ ಮಾಡಿಕೊಳ್ಳಬೇಕಾಗಿ ಬಂದರೂ, ಬಾಗುವ ಪರಿಸ್ಥಿತಿ ಬಂದರೂ, ಸಹಿಸಬೇಕಾಗಿ ಬಂದರೂ, ಅನ್ಯರಿಂದ ಕೇಳಬೇಕಾಗಿ ಬಂದರೂ, ತಂದೆಯ ಸಮಾನವಾಗಬೇಕು ಎಂಬ ಸಂಕಲ್ಪ ನನಗೆ ದೃಢವಾಗಿ ಇದೆ.

4. ನನ್ನನ್ನು ಯಾರಾದರೂ ಅಗೌರವಪಡಿಸಿದರೂ, ತಿರಸ್ಕಾರ ಮಾಡಲಿ, ಅಪಮಾನ ಮಾಡಲಿ, ನಿಂದನೆ ಮಾಡಲಿ, ಯಾರೇ ದುಃಖ ಕೊಡಲಿ, ಅವರ ಮೇಲೆ ಶುಭ ಭಾವನೆಯನ್ನು ಮಾತ್ರ ಬಿಡುವುದಿಲ್ಲ.

5. ಮಾಯೆಯನ್ನು, ಪ್ರಕೃತಿಯನ್ನು ಪರಿವರ್ತನೆ ಮಾಡುವ ನಾನು ವಿಶ್ವ ಪರಿವರ್ತಕನು.

6. ಯಾರಾದರೂ ಅವರ ಸಂಸ್ಕಾರಗಳಿಗೆ ವಶವಾಗಿ ನನಗೆ ದುಃಖವನ್ನು ಕೊಟ್ಟರೂ, ಪೆಟ್ಟು ಮಾಡಿದರೂ, ಏರುಪೇರು ಮಾಡಿದರೂ, ನಾನು ದುಃಖದ ವಿಷಯಗಳನ್ನು ಸುಖದಲ್ಲಿ ಪರಿವರ್ತನೆ ಮಾಡಿ ಅಪಮಾನವನ್ನು ಸಹಿಸಿ ಗ್ಲಾನಿಯನ್ನು ಗುಲಾಬಿಯನ್ನಾಗಿ ಮಾಡಿಕೊಂಡು, ಸಮಸ್ಯೆಯನ್ನು ತಂದೆಯ ಸಮಾನವಾಗಬೇಕೆಂಬ ಸಂಕಲ್ಪದಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

7. ನಾನು ತಂದೆಯ ಮಗು, ತಂದೆ ನನ್ನವರು.

8. ನಾನು ಮಾಯೆಯ ರಾಯಲ್ ರೂಪಗಳನ್ನು ಗುರುತಿಸಿರುವ ಮಾಯಾಜಿತ್ ಸ್ವರೂಪ.

9. ನಾನು ಸ್ವಮಾನದಲ್ಲಿ ಇರುತ್ತಾ ಇತರರಿಗೆ ಸನ್ಮಾನವನ್ನು ಮಾಡಿ ತಂದೆಯ ಸಮಾನವಾಗಿದ್ದೇನೆ.

10. ಯಾರೇ ಎಷ್ಟೇ ಅಲುಗಾಡಿಸಿದರೂ ನನ್ನ ಧೃಡತೆಯು ಬಲಶಾಲಿಯಾಗಿರುವ ನಾನು ಮಾಸ್ಟರ್ ಸರ್ವ ಶಕ್ತಿವಂತನು.

11. ಯಾರಾದರೂ ಸಂಸ್ಕಾರಗಳ ವಶವಾಗಿ, ಪರವಶವಾಗಿ 95% ತಪ್ಪು ಮಾಡಿ 5% ಒಳ್ಳೆಯದು ಮಾಡಿದಾಗ ನಾನು ಆ ಐದು ಪ್ರತಿಶತ ಒಳ್ಳೆಯದನ್ನು ತೆಗೆದುಕೊಂಡು ಮೊದಲು ಅವರಲ್ಲಿ ಧೈರ್ಯವನ್ನು ತುಂಬಿ ನಂತರ ಅವರ ಸಮಯ ಮತ್ತು ಸ್ವರೂಪವನ್ನು ತಿಳಿದುಕೊಂಡು ವಿಷಯಗಳನ್ನು ಸರಿ ಮಾಡುತ್ತಿದ್ದೇನೆ.